Reg. No. | | | | | | | | | |

# BSCKAL 153/FNDKAL 153/HRDKAL 153

**Credit Based Second Semester B.Sc./B.Sc. (FND)/B.A. (HRD)**
**Examination, April/May 2015**
**(2013-2014 Batch Onwards)**
**KANNADA LANGUAGE**

Time : 3 Hours Max. Marks : 80

## ಭಾಗ – 1 : ಕಾವ್ಯ

Shri Dharmasthala Manjunatheshwara
College of Business Management Library
MANGALORE - 575 003

I. ಅ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಉತ್ತರಿಸಿರಿ. **(1×8=8)**

1) ಭೀಷ್ಮನಿಗೆ ಸೇನಾಧಿಪತಿ ಪಟ್ಟವನ್ನು ಕಟ್ಟಿದ ಸನ್ನಿವೇಶದ ಸ್ವಾರಸ್ಯವನ್ನು ಕಾವ್ಯಭಾಗದ ಹಿನ್ನೆಲೆಯಲ್ಲಿ ವಿವರಿಸಿ.

2) ಸಮಾಜದ ತಾರತಮ್ಯ ವ್ಯವಸ್ಥೆಯ ಕುರಿತು ಕವಿಗಿರುವ ಅಸಹನೆ 'ಬಡತನದ ಬಡಬಾಗ್ನಿ' ಕವಿತೆಯಲ್ಲಿ ಹೇಗೆ ಪ್ರಕಟವಾಗಿದೆ ? ವಿವೇಚಿಸಿ.

ಆ) ಕೆಳಗಿನವುಗಳಲ್ಲಿ **ಒಂದು** ಪ್ರಶ್ನೆಗೆ ಸಂಕ್ಷಿಪ್ತವಾಗಿ ಉತ್ತರಿಸಿ. **(1×5=5)**

1) ಲೋಕದ ಬದುಕನ್ನು ಕಾಪಾಡಲು ಪ್ರಯತ್ನಿಸಿದ ಮಹಾಮಹಿಮರ ಬದುಕಿನ ಮುಹೂರ್ತವನ್ನು ಜಿ. ಎಸ್. ಎಸ್. ಅವರ ಕವನದ ಹಿನ್ನೆಲೆಯಲ್ಲಿ ವಿವರಿಸಿ.

2) ಕುಂತಿಯ ಕಷ್ಟಕಾರ್ಪಣ್ಯಗಳು ಜನಪದ ಗೀತೆಯಲ್ಲಿ ಹೇಗೆ ಚಿತ್ರಿತವಾಗಿವೆ ? ವಿಶ್ಲೇಷಿಸಿ.

ಇ) **ಎರಡು** ಪ್ರಶ್ನೆಗಳಿಗೆ ಟಿಪ್ಪಣಿ ಬರೆಯಿರಿ. **(2×3=6)**

1) ದ್ರೋಣ

2) ಕೆ. ಎಸ್. ನರಸಿಂಹಸ್ವಾಮಿ

3) ಪುರಂದರದಾಸರು.

P.T.O.

II. ಅ) **ಒಂದು** ಪದ್ಯಭಾಗದ ಸಂದರ್ಭ ಸೂಚಿಸಿ, ಮಹತ್ವವನ್ನು ವಿವೇಚಿಸಿ. **(1×5=5)**

1) ಸಿಂಗದ ಮುಪ್ಪು ನೆಗಳ್ದೀ
ಗಾಂಗೇಯರ ಮುಪ್ಪುಮಿಟಿಕೆವಡೆಗುಮೆ
ವನಮಾ
ತಂಗಂಗಳಿನಸುಹೃಚ್ಚತು
ರಂಗಬಲಂಗಳಿನದೆಂತುಮಂಗಾಧಿಪತೀ

2) ಹೆತ್ತ ಸೂತಕ ಮತ್ತೆ ಹತ್ತು ದಿನ ಪರಿಯಂತ
ಮೃತ್ಯು ಸೂತಕವು ಹನ್ನೊಂದು ದಿವಸ
ಮತ್ತೆ ಋಣ ಸೂತಕವು ಜನ್ಮಜನ್ಮಾಂತರದಿ
ಎತ್ತ ಪೋದರು ಬಿಡದೆ ಬೆನ್ನಟ್ಟಬಹುದು
ಅವನ ಒಡವೆಗಳಿಂದ ದಾನ ಧರ್ಮವ ಮಾಡಿ
ಅವನಿಗಲ್ಲದ ಪುಣ್ಯ ಇವನಿಗುಂಟೆ ?

ಆ) **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ, ಸ್ವಾರಸ್ಯವನ್ನು ವಿಶದಪಡಿಸಿ. **(2×3=6)**

1) ತನ್ನಿಕ್ಕಿದ ತತ್ತಿಯನೆ ಪಾವು ನೊಣೆವಂ ತಕ್ಕುಂ
2) ಅಗ್ನಿಕುಂಡದಿ ಬಿದ್ದು ಬೆಂದರವರು
3) ಹೂತ ಕಣ್ಣಿನ ಮುಂದೆ ಸೊನ್ನೆಬೀದಿ.

III. ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. **(5×1=5)**

1) 'ಭಗವತಿ' ಈ ಪದದ ಅರ್ಥವೇನು ?
2) ಪುರಂದರದಾಸರ ಗುರುಗಳು ಯಾರು ?
3) ದ್ವೈಮಾಸಿಕ ಪತ್ರಿಕೆಯ ಸಂಪಾದಕರು ಯಾರು ?
4) ಹತ್ತಿ ಮತ್ತೂರು ಯಾವ ಜಿಲ್ಲೆಯಲ್ಲಿದೆ ?
5) ಕೊಂತ್ಯಮ್ಮನ ಹಾಡನ್ನು ನಿರರ್ಗಳವಾಗಿ ಹಾಡುತ್ತಿರುವವರು ಯಾರು ?

## ಭಾಗ – 2 : ಗದ್ಯ

IV. ಅ) **ಒಂದನ್ನು** ಉತ್ತರಿಸಿರಿ. **(1×8=8)**

1) ಸಮಾಜಕ್ಕೆ ವಿಜ್ಞಾನ ಮತ್ತು ಸಾಹಿತ್ಯದ ಕೊಡುಗೆಯ ಕುರಿತು ಲೇಖನದ ಅಭಿಪ್ರಾಯಗಳನ್ನು ವಿವರಿಸಿ.
2) 'ಅಸ್ಪೃಶ್ಯತೆ'ಯ ಕುರಿತು ಲೇಖಕರ ಅಭಿಪ್ರಾಯಗಳನ್ನು ಪ್ರಬಂಧದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ. **(1×8=8)**

1) ಜನಪದ ಕತೆಗಳಲ್ಲಿ ಬಹಳ ಜನಪ್ರಿಯವಾದ ಒಂದು ಕತೆ ಸ್ನೋ ವೈಟ್ ಹೇಗೆ ? ವಿವರಿಸಿ.
2) 'ವಿಜ್ಞಾನ ಪ್ರಶ್ನೆ' ಪ್ರಬಂಧದಲ್ಲಿ ವಿಜ್ಞಾನಕ್ಕಿರುವ ಸವಾಲುಗಳನ್ನು ಹೇಗೆ ಚರ್ಚಿಸಲಾಗಿದೆ ? ವಿವರಿಸಿ.

V. **ಒಂದು** ಪ್ರಶ್ನೆಗೆ ಉತ್ತರಿಸಿ. (1×5=5)

1) ಮೂಲಿಕೆ ಬಳ್ಳಿಯ ಸುತ್ತ ಹೆಣೆದ ಕತೆಗಳ ಸತ್ಯಾಂಶವನ್ನು ತಿಳಿದುಕೊಳ್ಳುವಲ್ಲಿ ಲೇಖಕರ ಪಾತ್ರವೇನು ? ವಿವರಿಸಿ.

2) ಮತ್ತೊಂದು ಭೂಸುಧಾರಣೆ ಅನಿವಾರ್ಯ ಎನ್ನುವ ಲೇಖಕರ ಅಭಿಪ್ರಾಯಗಳನ್ನು ವಿಶ್ಲೇಷಿಸಿ.

VI. ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. (4×1=4)

1) 'ರೇಡಿಯಂ' ಕಂಡುಹಿಡಿದ ವಿಜ್ಞಾನಿ ಯಾರು ?

2) ಮೂಲಿಕೆ ಬಳ್ಳಿಯ ಗಡ್ಡೆ ಯಾವ ರೋಗಕ್ಕೆ ಔಷಧಿ ?

3) 'ಜರ್ಮನಿಯ ಒಳಗಿನಿಂದ' – ಈ ಕೃತಿಯ ಲೇಖಕರು ಯಾರು ?

4) ವರ್ಣಭೇದ ನೀತಿಯನ್ನು ಕೊನೆಗಾಣಿಸುವಲ್ಲಿ ಸಕ್ರಿಯವಾಗಿ ಭಾಗವಹಿಸಿದ ದೇಶ ಯಾವುದು ?

## ಭಾಗ – 3 : ನಾಟಕ

VII. ಅ) **ಒಂದಕ್ಕೆ** ಉತ್ತರಿಸಿರಿ. (1×8=8)

1) ಅಣ್ಣಪ್ಪ ಪೆರ್ಗಡೆ ದೈವವಾದ ಸನ್ನಿವೇಶವನ್ನು ನಾಟಕದ ಹಿನ್ನೆಲೆಯಲ್ಲಿ ವಿಶ್ಲೇಷಿಸಿ.

2) 'ಮೂರು ಹೆಜ್ಜೆ ಮೂರು ಲೋಕ' – ಒಂದು ಸೃಜನಶೀಲ ನಾಟಕ ಹೇಗೆಂದು ವಿವರಿಸಿ.

ಆ) **ಒಂದು** ಪ್ರಶ್ನೆಗೆ ಉತ್ತರಿಸಿ. (1×6=6)

1) ಬಾಲಕ ಬಲಿ ಪಟ್ಟವೇರಿದ ಸಂದರ್ಭವು ನಾಟಕದಲ್ಲಿ ಹೇಗೆ ಚಿತ್ರಿತವಾಗಿದೆ ? ವಿವರಿಸಿ.

2) ಕರಾವಳಿಯ ಸಂಸ್ಕೃತಿಯ ಚಿತ್ರಣ ನಾಟಕದಲ್ಲಿ ಹೇಗೆ ಮೂಡಿ ಬಂದಿದೆ ? ವಿವರಿಸಿ.

VIII. **ಎರಡು** ಸಾಲುಗಳಿಗೆ ಸಂದರ್ಭ ಸೂಚಿಸಿ ಸ್ವಾರಸ್ಯವನ್ನು ವಿಶದಪಡಿಸಿ. (2×2=4)

1) ಓ ಸತ್ಯಪುತ್ರನೇ ನಾನು ಕೇವಲ ಚಾಕರಿಯ ಆಳು.

2) ಈ ನಾರಾಯಣ ದೇವರು ನಮ್ಮ ಕುಟುಂಬಕ್ಕೇ ಪರಮ ಶತ್ರು.

3) ಓ ಕುಮಾರ, ಸಿಂಹದ ಬಾಯಿಗೆ ಕೈ ಹಾಕಿದೆ.

Shri Dharmasthala Manjunatheshwara
College of Business Management Library
MANGALORE - 575 003

IX. ಕೆಳಗಿನ ಪ್ರಶ್ನೆಗಳಿಗೆ **ಪ್ರತಿಯೊಂದಕ್ಕೂ ಒಂದೊಂದು** ವಾಕ್ಯದಲ್ಲಿ ಉತ್ತರಿಸಿ. (2×1=2)

1) ಕೇಂಜವ – ಇದು ಏನು ?

2) ಡಾ. ಡಿ. ಕೆ. ಚೌಟರ ಕಾವ್ಯನಾಮ ಯಾವುದು ?

---